**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.**

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 907/2015 .

ಪ್ರಾ.ಸಾ.:1
ಚಾ.ಸಾ.:1

| | |
|---|---|
| ಹೆಸರು | : ಚಕ್ಕೇರ ಸುನೀಲ್ ಮಂದಪ್ಪ |
| ತಂದೆಯ ಹೆಸರು | : ಲೆ. ಪೂವಣ್ಣ |
| ವಯಸ್ಸು | : 50 ವರ್ಷ |
| ಉದ್ಯೋಗ | : ವ್ಯವಸಾಯ |
| ವಿಳಾಸ | : ತೈಲಾ ಗ್ರಾಮ |

... ............................................................................................ ...

ದಿನಾಂಕ 16 ನೇ ಫೆಬ್ರವರಿ 2021 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ:- ಮಾನ್ಯ ಸ ಸ ಅ ರವರಿಂದ : -

ನನಗೆ ಕುಟ್ಟ ತೈಲಾ ಗ್ರಾಮದಲ್ಲಿ ಕಾಫಿ ತೋಟವಿದ್ದು ಅಲ್ಲಿಯೆ ನಾನು ಹುಟ್ಟಿ ಬೆಳೆದಿದ್ದೇನೆ, ನನಗೆ 18 ಎಕರೆ ಕಾಫಿ ತೋಟವಿದೆ. ದಿ:8.08.2019 ರಂದು ವಿಪರೀತ ಮಳೆ ಇದ್ದ ಕಾರಣ ನನ್ನ ಮಕ್ಕಳಿಗೆ ಶಾಲೆಗೆ ರಜೆ ಘೋಷಿಸಿದ್ದರು. ಆ ದಿನ ನಾವು ಮೈಸೂರಿನಲ್ಲಿರುವ ನಮ್ಮ ಮಾವನ ಮನೆಗೆ ಹೋದೆವು. ಅಲ್ಲಿ ಇರುವಾಗ ದಿ:12.08.2019 ರಂದು ನಮ್ಮ ಮನೆಯ ಆಳು ಚಾಸಾ 3 ರವರು ನನಗೆ ಫೋನ್ ಮಾಡಿ ಮನೆಯ ಹಿಂಭಾಗದ ಬಾಗಿಲು ತೆರೆದಿರುವುದು ಕಂಡು ಬಂದಿರುತ್ತದೆ ಎಂದು ಹೇಳಿದ್ದರು. ನಂತರ ನಾವು ಅದೇ ದಿನ ರಾತ್ರಿ 11 ಗಂಟೆಗೆ ನಮ್ಮ ಮನೆಗೆ ವಾಪಸ್ಸು ಬಂದೆವು. ಯಾರೋ ಕಳ್ಳರು ನಮ್ಮ ಮನೆಯ ಹಿಂಬಾಗಿಲನ್ನು ನೂಕಿ ಒಳಗೆ ಬಂದು ನಮ್ಮ ಮಲಗುವ ಕೋಣೆಯಲ್ಲಿದ್ದ ಗೋದ್ರೆಜ್ ಬೀರಿನ ಬೀಗವನ್ನು ಯಾವುದೋ ಆಯುಧಗಳಿಂದ ಮುರಿದು ತೆಗೆದು ಅಲ್ಲಿ ಇಟ್ಟಿದ್ದ ಆಭರಣಗಳನ್ನು ಕಳುವು ಮಾಡಿಕೊಂಡು ಹೋಗಿದ್ದರು. ನಾವು ಅಲ್ಲಿ ಒಂದು ಜೋಮಾಲೆ, ಪತ್ತಾರು, ಬಳೆಗಳು, ಚೈನು, ಕಿವಿ ಓಲೆಗಳು, ಬ್ರೈಸ್ ಲೈಟ್, ಉಂಗುರಗಳನ್ನು, ಲಾಕೆಟ್ ಅನ್ನು, ನೆಕ್ಲೆಸ್ ತರ ಇರುವ ಒಂದು ಅಡಿಗೆ, ಡೈಮೆಂಡ್ ಸೆಟ್, ಪರ್ಲ್ ನೆಕ್ಲೇಸ್ ಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದರು. ಒಟ್ಟು ಅಂದಾಜು 5 ರಿಂದ 6 ಲಕ್ಷ ಬೆಲೆಯುಳ್ಳ ಸುಮಾರು 400 ಗ್ರಾಂ ನಷ್ಟು ಒಡವೆಗಳು ಕಳ್ಳತನವಾಗಿದ್ದವು. ನಂತರ ದಿ:13.08.2019 ರ ಬೆಳಗೆ ನಾವು ದೂರನ್ನು ಕೊಟ್ಟೆವು.ಈಗ ನೋಡುತ್ತಿರುವ ದೂರನ್ನು ನಾನು ದಾಖಲೆಸಿದ್ದೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1, ಸಾಕ್ಷಿ ಸಹಿ ನಿಪಿ 1ಎ ಅಂತ

ಗುರುತಿಸಲಾಯಿತು. ದೂರು ಕೊಟ್ಟ ನಂತರ ಅದೇ ದಿನ 2 ಗಂಟೆ ಸುಮಾರಿಗೆ ಪೋಲೀಸರು ನಮ್ಮ ಮನೆಗೆ ಬಂದು ಸ್ಥಳಪರಿಶೀಲಿಸಿ ಮಹಜರ್ ಕ್ರಮ ಜರುಗಿಸಿದರು. ಆ ಸಮಯದಲ್ಲಿ ಒಂದು ರಾಡ್ ಹಾಗು ಒಂದು ಆಭರಣ ಇಡುವ ಬಾಕ್ಸ್ ಆ ಸ್ಥಳದಲ್ಲಿ ಸಿಕ್ಕಿತು, ನಂತರ ಅವುಗಳನ್ನು ತೆಗೆದುಕೊಂಡು ಹೋದರು. ಪೋಲೀಸರು ಬಂದಾಗ ಸ್ಥಳದಲ್ಲಿ ಹೆಜ್ಜೆ ಗುರುತುಗಳ ಬಗ್ಗೆ ಪರಿಶೀಲಿಸಿದರು. ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ, ಸಾಕ್ಷಿ ಗುರುತಿಸಿರುವ ದಾಖಲೆ ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ 2, ಸಾಕ್ಷಿ ಸಹಿ ನಿಪಿ 2ಎ ಅಂತ ಗುರುತಿಸಲಾಯಿತು. ಸದರಿ ರಾಡ್ ಹಾಗು ಬಾಕ್ಸ್ ಅನ್ನು ನೋಡಿದರೆ ಗುರುತಿಸುತ್ತೇನೆ.

ದಿಃ11.09.2019 ರಂದು ಪೊಲೀಸ್ ಠಾಣೆಯಿಂದ ನನಗೆ ಕರೆ ಬಂದಿತ್ತು, ಆರೋಪಿಯು ಸಿಕ್ಕಿದ್ದಾರೆ, ಠಾಣೆಗೆ ಬನ್ನಿ ಎಂದು ಪೋಲೀಸರು ತಿಳಿಸಿದರು. ಆಗ ನಾನು, ನನ್ನ ಹೆಂಡತಿ ಠಾಣೆಗೆ ಹೋದೆವು. ಅಲ್ಲಿ ದೇವಯ್ಯ ಮತ್ತು ಮೋಹನ್ ಎಂಬುವರು ಠಾಣೆಯಲ್ಲಿ ಇದ್ದರು. ಪೋಲೀಸರು ಆರೋಪಿತರಿಂದ ವಶಪಡಿಸಿಕೊಂಡ ಆಭರಣಗಳನ್ನು ತೋರಿಸಿದರು, ಸದರಿ ಆಭರಣಗಳು ನಮ್ಮ ಮನೆಯಿಂದ ಕಳ್ಳತನವಾಗಿದ್ದ ಆಭರಣಗಳೆ ಆಗಿದ್ದವು. ನಮ್ಮ ಆಭರಣಗಳ ಪೈಕಿ ಕೆಲವುಗಳನ್ನು ಕರಗಿಸಿ ಚಿನ್ನದ ಗಟ್ಟಿ ಮಾಡಿಕೊಂಡಿದ್ದರು. ಪಂಚನಾಮೆ ಕಾಲಕ್ಕೆ ವಶಪಡಿಸಿಕೊಂಡ ಒಂದು ರಾಡ್, ಒಂದು ಬಾಕ್ಸ್ ಹಾಗು ಒಡೆದ ಬಾಗಿಲಿನ ಮರದ ಪೀಸನ್ನು ಈಗ ನೋಡುತ್ತಿದ್ದು ಅವುಗಳನ್ನು ಎಂ ಒ 1 ರಿಂದ 3 ಅಂತ ಗುರುತಿಸಲಾಯಿತು. ನಮ್ಮ ಮನೆಯ ಗಾಡ್ರೆಜ್ ನಲ್ಲಿ ಇಟ್ಟಿದ್ದ ಎರಡು ಪರ್ಸ್ ಗಳನ್ನು ಆರೊಪಿತರು ತೆಗೆದುಕೊಂಡು ಹೋಗಿದ್ದರು. ಅವುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಎಂ ಒ 4 ಮತ್ತು 5 ಅಂತ ಗುರುತಿಸಲಾಯಿತು. ಈಗ ನೋಡುತ್ತಿರುವ ಚಿನ್ನದ ಸರವನ್ನು ಆರೋಪಿತರಿಂದ ವಶಪಡಿಸಿಕೊಂಡಿದ್ದು ಸದರಿ ಚಿನ್ನದ ಸರವನ್ನು ಠಾಣೆಯಲ್ಲಿ ನೋಡಿದ್ದೇನೆ. ಸಾಕ್ಷಿ ಚಿನ್ನದ ಸರವನ್ನು ನೋಡಿ ಗುರುತಿಸಿದ್ದು ಅದನ್ನು ಎಂ ಒ 6 ಅಂತ ಗುರುತಿಸಲಾಯಿತು. ನಾನು ನ್ಯಾಯಾಲಯದ ಆದೇಶ ಪಡೆದು ಆರೋಪಿತರಿಂದ ವಶಪಡಿಸಿಕೊಂಡಿದ್ದ ಒಡವೆಗಳನ್ನು ಬಿಡಿಸಿಕೊಳ್ಳುವಾಗ ತನಿಖಾಧಿಕಾರಿಯವರು ಪೋಟೋ ತೆಗೆದಿರುತ್ತಾರೆ. ಸದರಿ ಪೋಟೊಗಳನ್ನು ನಿಪಿ 3 ರಿಂದ 17,ಅದಕ್ಕೆ ಸಂಬಂದಿಸಿದ ಸಿಡಿ ನಿಪಿ 18 ಅಂತ ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ, ಈಗ 1ನೇ ಆರೋಪಿಯನ್ನು ವೀಡಿಯೋ ಕಾನ್ಪರನ್ಸ್ ಮೂಲಕ ಹಾಜರುಪಡಿಸಿದ್ದು ಸದರಿ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಈಗ ನ್ಯಾಯಾಲಯದ ಮುಂದಿರುವ 2ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈಗ ನನಗೆ ತೋರಿಸಿದ ಪೋಟೋಗಳನ್ನು ನಮ್ಮ ಮನೆಯಲ್ಲಿ ಮಹಜರ್ ಮಾಡುವಾಗ ತೆಗೆದಿರುತ್ತಾರೆ. ಸದರಿ ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 19 ರಿಂದ 30 ಅಂತ

ಗುರುತಿಸಲಾಯಿತು.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

<u>ಪಾಟೀ ಸವಾಲುಃ- ಮಾನ್ಯ ಸ ಸ ಅ ರವರಿಂದ</u> ಃ-

ನಾನು ಆ ದಿನ ಠಾಣೆಗೆ ಹೋಗಿ ಆರೋಪಿತರನ್ನು ಠಾಣೆಯಲ್ಲಿ ನೋಡಿದಾಗ 2 ಬ್ರೆಸ್ ಲೈಟ್, 4 ಬಳೆಗಳು, 2 ಚಿನ್ನ ಬ್ರೊಚ್,1 ಚಿನ್ನದ ಚೈನು, ಒಂದು ಡೈಮೆಂಡ್ ಓಲೆ, 2 ಕಿವಿಯೋಲೆ, 1 ಕರಿಮಣಿ ಸರ, 3 ಪೆಂಡೆಂಟ್ಗಳನ್ನು ಆರೋಪಿಗಳು ಮೈಸೂರಿನಲ್ಲಿ ಮಾರಾಟ ಮಾಡಿ ಹಣ ಪಡೆದಿದ್ದ ವಿಚಾರವನ್ನು ನಮ್ಮ ಮುಂದೆ ತಿಳಿಸಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲು : ಆರೋಪಿತರ ಪರ ಶ್ರೀ ಎಂ ಸಿ ಪಿ ವಕೀಲರಿಂದ</u> ಃ-

ಆರೋಪಿತರು ನಮಗೆ ಮೊದಲಿನಿಂದಲೂ ಪರಿಚಯ ಎಂದರೆ ಸರಿ. ಅವರಿಗೂ ನಮಗೂ ಮೊದಲಿನಿಂದಲೂ ಮಾತುಕತೆ ಇಲ್ಲ ಎಂದರೆ ಸರಿ. ನಾವು ನಮ್ಮ ಆಸ್ತಿಯನ್ನು ಲೀಸ್ ಗೆ ಕೊಟ್ಟಿದ್ದೇವೆ ಎಂದರೆ ಸರಿ. ಸುಮಾರು 4 ರಿಂದ 5 ಜನ ಬಂದು ಬೇರೆ ಬೇರೆ ಸಮಯದಲ್ಲಿ ಲೀಸ್ ಗೆ ಪಡೆದಿದ್ದರು ಎಂದರೆ ಸರಿ. ಲೀಸ್ ಪಡೆದವರು ಬಂದು ಹೋಗುತ್ತಿದ್ದರು ಎಂದರೆ ಸರಿ. ನನ್ನ ಆಳು ಇರುವ ಮನೆ ನಮ್ಮ ಮನೆ ಸುಮಾರು 300 ಮೀಟರ್ ದೂರದಲ್ಲಿದೆ . ಚಾಸಾ 3 ರವರಲ್ಲದೆ ಬೇರೆ ಆಳುಗಳು ಸಹ ನಮ್ಮ ಮನೆಯ ಹತ್ತಿರ ಇದ್ದಾರೆ ಎಂದರೆ ಸರಿ. ನಮ್ಮ ಮನೆಯ ಬಳಿ ಇದ್ದ ಒಬ್ಬ ಆಳಿನ ಮೇಲೆ ಕಳ್ಳತನದ ಆರೋಪಿ ಇದ್ದು ಸದರಿ ಪ್ರಕರಣದಲ್ಲಿ ಅವನು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದಾನೆ ಎಂದರೆ ಗೊತ್ತಿಲ್ಲ. ನಮ್ಮ ಲೈನ್ ಮನೆಯಲ್ಲಿರುವ ಆಳುಗಳಿಗೆ ಕುಡಿತದ ಚಟವಿದೆ ಎಂದರೆ ಸರಿ.

ದೂರನ್ನು ನಾನೆ ಬರೆದುಕೊಟ್ಟಿದ್ದೇನೆ. ದೂರನ್ನು ಮನೆಯಲ್ಲೆ ಬರೆದು ಠಾಣೆಗೆ ಕೊಟ್ಟಿರುತ್ತೇನೆ. ಪೊಲೀಸರು ಕೊಟ್ಟ ಮಾಹಿತಿಯಂತೆ ದೂರು ಬರೆದಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಗೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ನೆನಪಿಲ್ಲ. ಈ ಪ್ರಕರಣದಲ್ಲಿ ಒಟ್ಟು ಎಷ್ಟು ಸಹಿ ಮಾಡಿದ್ದೇನೆ ಅಂತ ನೆನಪಿಲ್ಲ. ಪೊಲೀಸರು ನನ್ನ

ಹೇಳಿಕೆ ಪಡೆದಿಲ್ಲ. ಪೋಟೋದಲ್ಲಿ ಕಾಣುತ್ತಿರುವ ಆಭರಣಗಳು ಎಲ್ಲಾ ಒಡವೆ ಅಂಗಡಿಗಳಲ್ಲೂ ಸಿಗುತ್ತವೆ ಎಂದರೆ ಸರಿಯಲ್ಲ. ಸದರಿ ಒಡವೆಗಳು ನಮಗೆ ಸೇರಿದ್ದವು ಎಂದು ಹೇಳಲು ವಿಶೇಷ ಗುರುತು ಇಲ್ಲ ಎಂದರೆ ಸರಿ. ಎಂ ಒ 1 ರಿಂದ 3 ರ ಮೇಲೆ ನಮ್ಮ ಸಹಿ ಇರುವ ಚೀಟಿ ಇಲ್ಲ ಎಂದರೆ ಸರಿ. ಎಂ ಒ 2 ಹಲಗೆ ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ.

ಮಹಜರ್ ನಲ್ಲಿ ಬರೆದಿರುವ ವಿಚಾರಗಳು ಗೊತ್ತು. ಅದರ ಚೆಕ್ಕುಬಂದಿ ಗೊತ್ತಿದೆ. ಮಹಜರ್ ಕಾಲಕ್ಕೆ ಚಾಸಾ 4 ಮತ್ತು 5 ರವರು ಹಾಜರಿದ್ದರು. ರಾಡು ಸಹ ಕಬ್ಬಿಣದ ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸರಿ. ಇಂತಹ ಆರೋಪಿಯೆ ಕದ್ದಿದಾರೆ ಅಂತ ತಿಳಿಸಿದ ಮೇರೆಗೆ ಮಾಹಿತಿ ಬಂತು ಎಂದರೆ ಸರಿ. ನಾನು ಮನೆಯಲ್ಲಿ ಇರದ ಸಂದರ್ಬದಲ್ಲಿ ನನ್ನನ್ನು ಕಾಣುವ ಸಲುವಾಗಿ ಬೇರೆಯವರು ಬಂದು ಹೋಗುತ್ತಿದ್ದರು ಎಂದರೆ ಗೊತ್ತಿಲ್ಲ. ನಮ್ಮದೆ ಆಭರಣಗಳು ಅಂತ ತೋರಿಸಲು ಯಾವುದೆ ಒಡವೆ ಅಂಗಡಿಯ ಬಿಲ್ ಗಳು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ಆರೋಪಿತರು ನಮ್ಮ ಮನೆಯಲ್ಲಿ ಯಾವುದೆ ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಪ್ರಕರಣಕ್ಕೂ, ಮು.ಮಾಲಿಗೂ ಯಾವುದೆ ಸಂಬಂದವಿಲ್ಲ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ಮಾತುಕತೆ ಇಲ್ಲದ ಕಾರಣ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಟೊಗಳನ್ನು ಪ್ರಕರಣಕ್ಕೋಸ್ಕರ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಪೋಟೋಗಳಿಗೂ ಆರೋಪಿತರಿಗೂ ಸಂಬಂದವಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ :-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.